Sri H. V. KOUJALGI.—There is one correction to the replies already given in the statements furnished, figures regarding Tumkur district have not been supplied. I think it is an error. I will supply figures subsequently.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಾಗಿದ್ದರೆ ಇದರ ಮೇಲೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ಇಲ್ಲ, ತುಮಕೂರು ಜಿಲ್ಲೆಯ ಪೂರಾ ಅಂಕಿಅಂಶ ಇಲ್ಲ, ಆದ್ದರಿಂದ ಸೋಮವಾರ ಇದನ್ನು ತೆಗೆದು ಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು.

Mr. SPEAKER.—This question No. 77 is held over. Sri C. M. S. Sastry is permitted to put question No. 115.

Improvement made by the Department of Information and Tourism

115. Sri C. M. S. SASTRY (Chickmanglur) [On behalf of SRI B. P. GANGADHAR (Tumkur)].—

Will the Minister for Industries, Information and Publicity be pleased to state :—

(*a*) the substantial improvements done by the Department of Information and Tourism during the last 3 years ;

(*b*) the basis for the release of Government advertisements and the list of advertisements released in Dailies and Weeklies from November 1966 onwards up to the end of December 1968 ;

(*c*) when the "Song and Drama Division" in the Information Department will be started and what are, its objects ;

(*d*) the names of documentaries produced by Government so far and the cost of each film ?

Sri M. RAJASEKHARA MURTHY (Minister for Industries, Information and Publicity).—

(*a*) A note is placed on the Table of the House.*

(*b*) Prior to November 1966 there was no media list in the department in respect of casual and commercial advertisement releases.

Action has been taken to prepare a *pro forma* and to collect infrormation from all newspapers in the State and to prepare a Media list depending upon the circulation and content of each newspaper.

Advertisement campaigns have been conducted through important newspapers with a view to invite industrialists to Mysore.

In respect of commercial publicity, special layouts have been prepared and released to the Press to catch the eye of the public to promote the sales of Silks, Soaps and Hassan Implements Factory products.

---

* Copy placed in the Mysore Legislature Library.

A list of newspapers and periodicals for which advertisement grants have been sanctioned for 1966-67, 1967-68 and 1968-69, is placed on the Table of the House.

(*c*) The Song and Drama Unit was started on 14th May 1968. The object of the Unit is to publicise the achievements of the various development schemes of Government through the media of Dance, Drama and Music.

(*d*) The names of documentaries and newsreels produced so far and their cost are as follows :—

Name of the documentary/Newsreel.	...	*Cost*
		Rs.
1 Decade of progress	...	38,086.00
2 Sharavathi	...	58,485.00
3 Plan achievements in Gulbarga, Bangalore and Mysore Divisions.	...	1,20,000.00
4 Confluence	...	60,000.00
5 Mysore News Reel No. 1	...	29,153.00
6 Mysore News Reel No. 2	...	20,000.00
7 Mysore News Reel No. 3	...	20,000.00
Total	...	3,45,724.00

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ವಿವರಗಳನ್ನು ಸಭೆಯ ಮುಂದೆ ಇಡಲಾಗಿರುವ ಪಟ್ಟಿಯಲ್ಲಿ ಒದಗಿಸಲಾಗಿದೆ ಎಂದು ಹೇಳಿದ್ದೀರಿ. ಆ ಪಟ್ಟಿ ಇಲ್ಲಿ ಇಲ್ಲ ಎಂದು ಹೇಳಿದರು. ಕೈಗಾರಿಕಾ ಮತ್ತು ವಾರ್ತಾ ಮಂತ್ರಿಗಳು ಅಡ್ವರ್‌ಟೈಸ್‌ಮೆಂಟ್ ಕೊಡತಕ್ಕ ಒಂದು ಉದ್ದೇಶವನ್ನು ಇಟ್ಟುಕೊಂಡು ಕಾಂಗ್ರೆಸ್‌ನವರು ನಡೆಸತಕ್ಕ ವಸ್ತುಪ್ರದರ್ಶನಕ್ಕೆ ತಾವು ಎಷ್ಟು ಅಡ್ವರ್‌ಟೈಸ್‌ಮೆಂಟ್ ಕೊಟ್ಟಿದ್ದೀರೋ ಹಾಗೆಯೇ ಇತರ ಪೌರಸಭೆಗಳವರು ನಡೆಸತಕ್ಕ ವಸ್ತುಪ್ರದರ್ಶನಕ್ಕೆ ಉದಾಹರಣೆಗೆ ದಾವಣಗೆರೆಯಲ್ಲಿ ನಡೆಸತಕ್ಕ ವಸ್ತು ಪ್ರದರ್ಶನಕ್ಕೆ ಎಷ್ಟು ಕೊಟ್ಟಿದ್ದೀರಿ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಎಂ. ರಾಜಶೇಖರಮೂರ್ತಿ.—ಕಾಂಗ್ರೆಸ್‌ನವರು ನಡೆಸುತ್ತಾರೆ ಅಥವಾ ಬೇರೆ ಪಾರ್ಟಿಯವರು ನಡೆಸುತ್ತಾರೆ ಎಂಬ ಬೇಸಿಸ್ ಮೇಲೆ ಅಡ್ವರ್‌ಟೈಸ್‌ಮೆಂಟ್ ಕೊಡುವುದಿಲ್ಲ. ಆಯಾಯಾ ಪ್ರದೇಶದಲ್ಲಿ ನಡೆಸತಕ್ಕ ಎಕ್ಸಿಬಿಷನ್ ಯಾವ ರೀತಿ ಇರುತ್ತದೆ ಎಂಬುದನ್ನು ನೋಡಿ ಕೊಂಡು ಕೊಟ್ಟಿದ್ದೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಕಾಂಗ್ರೆಸ್‌ನವರು ನಡೆಸಲಿ, ಪೌರಸಭೆಯವರು ನಡೆಸಲಿ ಅಥವಾ ಇತರೆ ಖಾಸಗಿಯವರು ನಡೆಸಲಿ ತಾವು ಕೊಟ್ಟಿರತಕ್ಕ ಅಡ್ವರ್‌ಟೈಸ್‌ಮೆಂಟ್ ಏನಿದೆಯೋ ಅದರಲ್ಲಿ ಯಾವ ವ್ಯತ್ಯಾಸವನ್ನೂ ಕೂಡ ಮಾಡಿಲ್ಲವೇ? ಒಂದೇ ರೀತಿಯಲ್ಲಿ ಕೊಟ್ಟಿದ್ದೀರಾ?

ಶ್ರೀ ಎಂ. ರಾಜಶೇಖರಮೂರ್ತಿ.—ಎಲ್ಲರಿಗೂ ಒಂದೇ ಸಮಾನಾಗಿ ಕೊಡುವುದಕ್ಕಾಗುವುದಿಲ್ಲ, ಯಾವುದಾದರೂ ಒಂದು ಹಳ್ಳಿಯಲ್ಲಿ ಎಕ್ಸಿಬಿಷನ್ ಮಾಡಿದರೆ ಅದಕ್ಕೆ ಐದು ಸಾವಿರ ರೂಪಾಯಿ ಕೊಡಿ ಎಂದರೆ ಕೊಡುವುದಕ್ಕಾಗುವುದಿಲ್ಲ. ಬೆಂಗಳೂರು ಸಿಟಿಯಲ್ಲಿ ಮಾಡುವುದನ್ನು ಅದಕ್ಕೆ ಕಂಪೇರ್ ಮಾಡಿಕೊಂಡು ಈಕ್ವಲ್ ಆಗಿ ಕೊಡಬೇಕೆಂದರೆ ಆಗುವುದಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಹೋದ ವರ್ಷ ದಾವಣಗೆರೆಯಲ್ಲಿ ಮುನಿಸಿಪಾಲಿಟಿಯವರು ವಸ್ತುಪ್ರದರ್ಶನವನ್ನು ನಡೆಸಿದರು. ಅವರಿಗೆ ಎಷ್ಟು ಅಡ್ವರ್‌ಟೈಸ್‌ಮೆಂಟ್ ಚಾರ್ಜಸ್ ಕೊಟ್ಟಿದ್ದೀರೋ ಅಷ್ಟೇ ಈ ಪರ್ಸ ಕಾಂಗ್ರೆಸ್‌ನವರು ನಡೆಸುತ್ತಾ ಇರತಕ್ಕ ವಸ್ತು ಪ್ರದರ್ಶನಕ್ಕೂ ಕೊಡುತ್ತೀರಾ?

Sri M. RAJASEKHARA MURTHY.—The request is being considered by the Government. We have not yet given advertisement to the Exhibition. ನನಗೆ ಜ್ಞಾಪಕ ಇರುವ ಹಾಗೆ ಹೋದ ವರ್ಷ ದಾವಣಗೆರೆಯಲ್ಲಿ ಮಾಡಿದ್ದಕ್ಕೆ ಒಂದು ಸಾವಿರ ರೂಪಾಯಿ ಕೊಟ್ಟಿರಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪ್ರತಿ ಜಿಲ್ಲೆಯಲ್ಲೂ ಇರತಕ್ಕ ಇನ್‌ಫರ್ಮೇಷನ್ ಆಫೀಸರುಗಳು ಪತ್ರಿಕಾ ಪ್ರತಿನಿಧಿಗಳನ್ನು ಮತ್ತು ಇತರ ಕೆಲವು ಮಹನೀಯರನ್ನು ಕರೆದು ಅವರಿಗೆ ಪ್ರತಿದಿವಸ ಶೋಡಶೋಪಚಾರ ನಡೆಸಿ ಅವರನ್ನು ತೃಪ್ತರನ್ನಾಗಿಟ್ಟುಕೊಂಡಿರಬೇಕೆನ್ನುವುದು ಈಗ ಮಾಡಿರತಕ್ಕ ಇಂಪ್ರೂವ್‌ಮೆಂಟ್‌ನಲ್ಲಿ ಅದೂ ಒಂದು ಆಲ್ಲವೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಶೋಡಶೋಪಚಾರ ಮಾಡಬೇಕೆಂದು ಎಲ್ಲಿ ಹೇಳಿದೆ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಆ ರೀತಿ ವರ್ತಮಾನ ಬಂದಿದೆ. ತಾವು ಮಾಡಿರತಕ್ಕ ಅಭಿವ್ಯದ್ಧಿಯಲ್ಲಿ ಇದೂ ಒಂದಾಗುತ್ತದೆಯೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಬಹುಶಃ ಇದು ಮಾನ್ಯ ಸದಸ್ಯರ ಊಹೆ ಎಂದು ಕಾಣುತ್ತದೆ. ಷೋಡಶೋಪಚಾರ ಪೂಜೆ ಮಾಡುತ್ತಾರೆಯೇ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಹಾಗೆ ಮಾಡುವುದಿಲ್ಲ. ಜಿಲ್ಲೆಗಳಲ್ಲಿರುವ ಅಧಿಕಾರಿಗಳು ಅಲ್ಲಿರುವ ಪತ್ರಿಕಾಕರ್ತರನ್ನು ಮತ್ತು ಇತರ ಮುಖ್ಯಸ್ಥರನ್ನು ಟಚ್‌ನಲ್ಲಿ ಇಟ್ಟುಕೊಂಡಿರಬೇಕು ಎನ್ನುವುದು ಇಲಾಖೆಯ ಮುಖ್ಯ ಕರ್ತವ್ಯಗಳಲ್ಲಿ ಒಂದು.

ಶ್ರೀ ಎಂ. ನಾಗಪ್ಪ.—ಯಾವ ಯಾವ ನ್ಯೂಸ್ ರೀಲ್ಸ್ ತೆಗೆದಿದ್ದಾರೆ ಎನ್ನುವುದನ್ನು ಹೇಳಿದ್ದಾರೆ. ಅದರಲ್ಲಿ ಮೂರನೆ ಯೋಜನೆಯ ಸಾಧನೆಗಳನ್ನು ಒಳಗೊಂಡ ಚಿತ್ರಗಳನ್ನು ತೆಗೆಯಲಾಗಿದೆ. ಇದರಲ್ಲಿ ಬೆಳಗಾಂ ಡಿವಿಜನ್‌ನಲ್ಲಿ ಪ್ಲಾನ್‌ನಲ್ಲಿ ಏನೂ ಆಗಿಲ್ಲ. ಅದಕ್ಕಾಗಿ ಸರ್ಕಾರ ಯಾವ ತರಹ ರೀಲನ್ನೂ ತೆಗೆದಿಲ್ಲ ಎಂದು ಭಾವಿಸಬಹುದೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಈಗ ಅದನ್ನು ಮಾಡುತ್ತಿದ್ದೇವೆ.

ಶ್ರೀ ಎಂ. ಮಲ್ಲಪ್ಪ.—ಗ್ರಾಮ ಯೂನಿಟ್ಟುಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪನೆ ಮಾಡಿ, ಅವರಿಗೆ ಹೆಚ್ಚು ಅನುಕೂಲಗಳನ್ನು ಕಲ್ಪಿಸಿಕೊಟ್ಟು ಆ ಜನ ಸುಸಂಸ್ಕೃತರಾಗುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ರಾಜಶೇಖರಮೂರ್ತಿ.—ಗ್ರಾಮಾಂತರ ಪ್ರದೇಶವಲ್ಲ ಸ್ಥಾಪನೆ ಮಾಡುವುದಕ್ಕಾಗುವುದಿಲ್ಲ. ಸೆಂಟ್ರಲ್ ಯೂನಿಟ್ ಇದೆ. ಈ ಯೂನಿಟ್ ಎಲ್ಲ ಭಾಗಗಳಿಗೂ ಹೋಗುತ್ತದೆ. ಕಾನ್‌ಫರೆನ್ಸ್ ಆಗಲೀ, ಎಗ್ಸಿಬಿಷನ್ ಆಗಲೀ, ಡಿಗ್ನಿಟರೀಸ್ ಬರಲೀ ಅಂಥ ಸಂದರ್ಭಗಳಲ್ಲಿ ಹಳ್ಳಿಗಳಿಗೆ ಹೋಗುತ್ತಾರೆ, ತಾಲ್ಲೂಕು ಹೆಡ್‌ಕ್ವಾರ್ಟರುಗಳಿಗೆ ಹೋಗುತ್ತಾರೆ, ಡಿವಿಜನಲ್ ಹೆಡ್ ಕ್ವಾರ್ಟರುಗಳಿಗೆ ಹೋಗುತ್ತಾರೆ. ಸಂದರ್ಭ ಬಂದಾಗಲೆಲ್ಲ ನಾಟಕಗಳನ್ನೂ ಏರ್ಪಾಡು ಮಾಡುತ್ತಾರೆ. ಆ ಮುಖಾಂತರ ಸಾಕಾದಷ್ಟು ಕುಟುಂಬ ಯೋಜನೆ, ಸಣ್ಣ ಉಳಿತಾಯ ಇಂಥ ಕೆಲವು ವಿಚಾರಗಳ ಬಗ್ಗೆ ಸಾಕಾದಷ್ಟು ಪ್ರಚಾರ ಮಾಡುತ್ತಾರೆ.

ಶ್ರೀ ಬಿ. ದೊಡ್ಡಜೋರೇ ಗೌಡ.—ಸಂಗೀತ ಮತ್ತು ನಾಟಕ ವಿಭಾಗವನ್ನು ಇನ್ನೂ ಹೆಚ್ಚು ಮಾಡಿ ಅದರಿಂದ ಅವಿದ್ಯಾವಂತರಾಗಿರುವ ಗ್ರಾಮಾಂತರ ಪ್ರದೇಶದ ಜನರನ್ನು ಜಾಗೃತ ಗೊಳಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

Sri M. RAJASEKHARA MURTHY.—I bear that suggestion in mind.

ಶ್ರೀ ಆರ್. ಮುನಿಸ್ವಾಮಯ್ಯ.—ನ್ಯೂಸ್ ರೀಲುಗಳನ್ನು ಎಲ್ಲೆಲ್ಲಿ ಪ್ರದರ್ಶನ ಮಾಡುವುದಕ್ಕೆ ಏರ್ಪಾಡು ಮಾಡಿದ್ದೀರಿ ?

ಶ್ರೀ ಎಂ. ರಾಜಶೇಖರಮೂರ್ತಿ.—ರಾಜ್ಯದ ಎಲ್ಲ ಭಾಗಗಳಲ್ಲಿಯೂ ಪ್ರದರ್ಶಿಸುವುದಕ್ಕೆ ಏರ್ಪಾಡು ಮಾಡಲಾಗಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಪ್ರದರ್ಶನ ಮಾಡುವುದಕ್ಕೆ ತಮ್ಮಿಂದ ಏನಾದರೂ ರುಸುಂ ಕೊಡಲಾಗುವುದೇ ?

ಶ್ರೀ ಎಂ. ರಾಜಶೇಖರಮೂರ್ತಿ.—ನಮ್ಮಲ್ಲಿ ಪ್ರೊಜೆಕ್ಷರುಗಳಿವೆ. ಅವುಗಳನ್ನು ಡಿಸ್ಟ್ರಿಕ್ಟ್ ಆಫೀಸರುಗಳಿಗೆ ಕೊಟ್ಟಿದ್ದೇವೆ. ನ್ಯೂಸ್ ರೀಲ್ಸ್ ಕೂಡ ಅವರಿಗೆ ಕೊಡುತ್ತೇವೆ. ಅವರಲ್ಲಿ ವಾಹನಗಳಿವೆ. ಅವರು ಎಲ್ಲ ಭಾಗಗಳಿಗೂ ಹೋಗಿ ಪ್ರದರ್ಶನ ಮಾಡುತ್ತಾರೆ.

ಶ್ರೀ ಎಂ. ನಾಗಪ್ಪ.—ಸಂಗೀತ ಮತ್ತು ನಾಟಕ ವಿಭಾಗ ಎಂದು ಹೇಳಿದ್ದರೆ. ನಾಟಕ ಕಂಪೆನಿಗಳು ಅಲ್ಲಿ ಬರುತ್ತವೇಯೇ?

ಶ್ರೀ ಎಂ. ರಾಜಶೇಖರಮೂರ್ತಿ.—ಅದಕ್ಕೆ ಪ್ರತ್ಯೇಕವಾದ ವಿಭಾಗವಿದೆ. ಅಮೆಚೂರ್ ನಂಸ್ಥೆಗಳನ್ನೂ ಅಸೋಸಿಯೇಟ್ ಮಾಡಿಕೊಳ್ಳುತ್ತೇವೆ.

Sri H. SIDDAVEERAPPA.—What is the annual expenditure of this Unit mentioned in sub-para (c)?

Sri M. RAJASEKHARA MURTHY.—I want notice.

ಶ್ರೀ ಎಂ. ಕೆ. ಬೊಮ್ಮೇಗೌಡ.—10 ವರ್ಷಗಳಲ್ಲಿ 38,086 ರೂಪಾಯಿ ಖರ್ಚಾಗಿದೆ ಎಂದು ಹೇಳಿದ್ದಾರೆ ಇದರಲ್ಲಿ ಏನೇನು ಸಾಧಿಸಿದ್ದಾರೆ, ಯಾವ ಯಾವ ರೀತಿ ಪ್ರಗತಿಯಾಗಿದೆ ಎಂದು ಹೇಳುತ್ತಾರೆಯೇ?

ಶ್ರೀ ಎಂ. ರಾಜಶೇಖರಮೂರ್ತಿ.—ಪ್ರೊಗ್ರೆಸ್ ಎಂದರೆ ಹತ್ತು ವರ್ಷಗಳಲ್ಲಿ ಸಾಧಿಸಿದಂಥ ಕೆಲಸವೆನ್ನಲ್ಲ ತೋರಿಸುವಂಥ ಡಾಕ್ಯುಮೆಂಟರಿ ಫಿಲಂ ತಯಾರು ಮಾಡಿದ್ದೇವೆ. ಅದಕ್ಕೆ ಇಷ್ಟು ಹಣ ಖರ್ಚಾಗಿದೆ.

Sri B. B. SAYANAK.—It is a fact that Belgaum and surrounding areas belong to Maharashtra. That is why there is no news reel for this Belgaum area; is it not?

Sri H. N. NANJE GOWDA.—I take objection to this supplementary. It is not a fact.

Mr. SPEAKER.—It is a wishful thinking on the part of the hon. Member. Everybody is entitled to hold his own opinion.

Sri B. B. SAYANAK.—We are claiming that part.

Sri M. RAJASEKHARA MURTHY.—Even with regard to that Division, we are producing a documentary.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈಗಲಾದರೂ ವಾರ್ತಾ ಇಲಾಖೆಯವರು ರಾಜಕೀಯ ಪಕ್ಷಗಳು ಮುಂದೆ ನಡೆಸತಕ್ಕ ವನ್ನು ಪ್ರದರ್ಶನಗಳಿಗೆ ಸರ್ಕಾರದಿಂದ ಅಡ್ವರ್ಟೈಸ್‌ಮೆಂಟ್ ಕೊಡತಕ್ಕುದನ್ನು ನಿಲ್ಲಿಸುತ್ತಾರೆಯೇ?

ಶ್ರೀ ಎಂ. ರಾಜಶೇಖರಮೂರ್ತಿ.—ರಾಜಕೀಯ ಪಕ್ಷಗಳು ಮಾಡುತ್ತವೆ ಎಂದು ನಿಲ್ಲಿಸುವುದಕ್ಕೆ ಹೋಗುವುದಿಲ್ಲ. ಬೆನಿಫಿಟ್ ಆದರೆ ಏಕೆ ಕೊಡಬಾರದು?

Ministers conversant with Kannada Language

126. Sri L. SRIKANTAIAH (Nanjangud).—

Will the Chief Minister be pleased to state :—

(*a*) whether all the Ministers of the present Government know to read and write Kannada Language;

(*b*) if not, the Ministers who do not know to read and write Kannada Language;

(*c*) the steps taken by the Government to make them learn to read and write Kannada Language?